# ಬಿಲ್‌ಗೇಟ್ಸ್: ಶೌಚಾಲಯ ಧ್ಯಾನ



ಶೌಚಾಲಯದ ಸಂಗತಿ ಎಂದಾಗ ಮೂಗು ಮುಚ್ಚಿಕೊಳ್ಳುವವರೇ ಹೆಚ್ಚು. ಆದರೆ ಬಿಲ್ ಗೇಟ್ಸ್ ಹಾಗಲ್ಲ. ಅವರಿಗೀಗ ಜಗತ್ತಿನ ಅತಿಮುಖ್ಯ ಸಂಗತಿ ಎಂ ದರೆ ಹೊಸ ಮಾದರಿಯ ಶೌಚಾಲಯಗಳ ನಿರ್ಮಾಣ. ಮೈಕ್ರೊಸಾಫ್ಟ್ ಕಂಪೆನಿಯ ಸಹಸ್ಥಾಪಕ, ಜಗತ್ತಿನ ಅತಿದೊಡ್ಡ ಶ್ರೀಮಂತ ಬಿಲ್ ಗೇಟ್ಸ್, ಈಗ ಹೊಸ ಮಾದರಿಯ ಟಾಯ್ಲೆಟ್ ಸಂಶೋಧನೆಯಲ್ಲಿ ಬ್ಯುಸಿ. 'ಗೃಹಬಳಕೆಯ ಮರುಶೋಧಿತ ಟಾಯ್ಲೆಟ್' ನಿರ್ಮಿಸಿ, ಅದನ್ನು ಜಗತ್ತಿನಾದ್ಯಂತ ಜನಪ್ರಿಯಗೊಳಿಸುವ ಒಂದೇ ಗುರಿ ಅವರದ್ದು. ಅದಕ್ಕೆಂದೇ ದೃಶ್ಯ, ಮುದ್ರಣ ಸಹಿತ ಎಲ್ಲ ಮಾಧ್ಯಮಗಳಲ್ಲಿ ಅವರು ಶೌಚಾಲಯದ ಬಗ್ಗೆ ಮಾತನಾಡಲು ತೊಡಗಿದ್ದಾರೆ. 'ವಿಂಡೋಸ್ ಆಪರೇಟಿಂಗ್ ಸಿಸ್ಟಂ ಬಗ್ಗೆ ಮಾತನಾಡಿದಷ್ಟೇ ಹೆಮ್ಮೆಯಿಂದ ನಾನೀಗ ಹೊಸ ಮಾದರಿಯ ಟಾಯ್ಲೆಟ್‌ಗಳ ಬಗ್ಗೆ ಮಾತನಾಡುತ್ತಿದ್ದೇನೆ' ಎಂದಿದ್ದಾರೆ ಬಿಲ್ ಗೇಟ್ಸ್.

ಅವರ ಮೈಕ್ರೊಸಾಫ್ಟ್ ಕಂಪನಿ ವಿಂಡೋಸ್ 1.0 ಆಪರೇಟಿಂಗ್ ಸಿಸ್ಟಂ ಅನ್ನು ಮಾರುಕಟ್ಟೆಗೆ ತಂದದ್ದು 1983 ನವೆಂಬರ್ 10ರಂದು. ಅದಕ್ಕೀಗ 35 ವರ್ಷ. ಆಗ ವಿಂಡೋಸ್ ಬಗ್ಗೆ ಮಾತನಾಡಿದ್ದಕ್ಕಿಂತ ಗಟ್ಟಿ ಧ್ವನಿಯಲ್ಲಿ ಈಗ ಬಿಲ್ ಗೇಟ್ಸ್ ಹೊಸ ಮಾದರಿಯ ಶೌಚಾಲಯದ ಬಗ್ಗೆ ಮಾತನಾಡಲು ತೊಡಗಿರುವುದಕ್ಕೆ ಕಾರಣಗಳಿವೆ. ಅದನ್ನು ಅವರ ಮಾತುಗಳಲ್ಲೇ ಹೀಗೆ ವಿವರಿಸಬಹುದು: 'ಜಗತ್ತಿನಾದ್ಯಂತ ಪ್ರತಿವರ್ಷ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ 5 ಲಕ್ಷ ಮಕ್ಕಳು ನೈರ್ಮಲ್ಯಸಂಬಂಧಿ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಡಯೋರಿಯಾ, ಕಾಲರಾ, ಟೈಫಾಯ್ಡ್ ಮುಂತಾದ ರೋಗಗಳಿಂದ ಮಕ್ಕಳ ಸಾವು ತಡೆಯಲು ಉಳಿದಿರುವ ಮುಖ್ಯ ದಾರಿ ಎಲ್ಲರಿಗೂ ಹೊಸ ಮಾದರಿಯ ಶೌಚಾಲಯವನ್ನು ಒದಗಿಸುವುದು' ಎಂದಿದ್ದಾರೆ ಗೇಟ್ಸ್.

ಅವರು ಹೇಳುವುದರಲ್ಲೂ ಸತ್ಯವಿದೆ. 'ವಿಶ್ವ ಆರೋಗ್ಯ ಸಂಸ್ಥೆ'ಯ ವರದಿ ಪ್ರಕಾರ, ಜಗತ್ತಿನಲ್ಲಿ ಶೇಕಡಾ 27ರಷ್ಟು ಮಂದಿ ಬಳಸುವ ಶೌಚಾಲಯಗಳ ತ್ಯಾಜ್ಯ ಮಾತ್ರ ಮರುಬಳಕೆಯಾಗುತ್ತಿದೆ. ಜಗತ್ತಿನ ಹತ್ತು ಜನರಲ್ಲಿ ಮೂವರಿಗೆ ಬಯಲೇ ಶೌಚಾಲಯ. ಅಮೆರಿಕದಲ್ಲಿ ಪ್ರತಿ ಮನೆಯವರು ಬಳಸುವ ನೀರಿನಲ್ಲಿ ಶೇಕಡಾ 30ರಷ್ಟು ಪ್ರಮಾಣದ ನೀರು ಕೇವಲ ಶೌಚಾಲಯಕ್ಕೆ ಬಳಕೆಯಾಗುತ್ತಿದೆ. ನೀರಿನ ಬಳಕೆಯಿಲ್ಲದ ಅತ್ಯಾಧುನಿಕ ಮಾದರಿಯ ಶೌಚಾಲಯ ಮಾರುಕಟ್ಟೆಗೆ ಬಂದರೆ ಲಾಭವೇ. ಒಂದು ಅಂದಾಜಿನ ಪ್ರಕಾರ, ಇಂತಹ ಹೊಸ ಮಾದರಿಯ ಗೃಹಬಳಕೆ ಶೌಚಾಲಯ ಮಾರುಕಟ್ಟೆಗೆ ಬಂದರೆ ವರ್ಷಕ್ಕೆ 6 ಶತಕೋಟಿ ಡಾಲರ್ ವಹಿವಾಟು ನಡೆಸಬಹುದು. ಹಾಗೆಂದು ಬಹುರಾಷ್ಟ್ರೀಯ ಕಂಪೆನಿಯೊಂದರ ಸಮೀಕ್ಷೆಯೇ ಹೇಳುತ್ತಿದೆ.

ಅದಕ್ಕೆಂದೇ ಬಿಲ್ ಗೇಟ್ಸ್ 'ಗೃಹ ಬಳಕೆ ಮರುಶೋಧಿತ ಟಾಯ್ಲೆಟ್' ಬಗ್ಗೆ ಮಾತನಾಡುತ್ತಿದ್ದಾರೆ. ಈ ಶೌಚಾಲಯವನ್ನು ಅವರ ಕಂಪನಿ ತಯಾರಿಸುತ್ತಿಲ್ಲ. ಚೀನಾದ ಕಂಪೆನಿಯೊಂದು ತಯಾರಿಸುತ್ತಿದೆ. ಆದರೆ ಈ ಹೊಸ ಮಾದರಿಯ ಶೌಚಾಲಯದ ಸಂಶೋಧನೆಗೆ ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಪ್ರತಿಷ್ಠಾನ 2011ರಿಂದೀಚೆಗೆ 200 ದಶಲಕ್ಷ ಡಾಲರ್ ವೆಚ್ಚ ಮಾಡಿದೆ. ಈ ಹೊಸ ಕಕ್ಕಸು ಒಂದು ರೀತಿಯಲ್ಲಿ ಬೂದಿಪೆಟ್ಟಿಗೆ ಇದ್ದಂತೆ. ನೀರಿನ ಬಳಕೆ ಇಲ್ಲ. ವಿಸರ್ಜಿಸಿದ್ದು ಬೂದಿಯಾಗುವಂತೆ ಅದರಲ್ಲೇ ಒಂದು ವ್ಯವಸ್ಥೆ ಇರುತ್ತದೆ. ವಾಸನೆಯೂ ಬರುವುದಿಲ್ಲ. ಕಡಿಮೆ ಬೆಲೆಯಲ್ಲಿ ಇದನ್ನು ತಯಾರಿಸಿ ಮೊದಲು ಚೀನಾ, ಆಫ್ರಿಕಾ ಮತ್ತು ಭಾರತದ ದೇಶಗಳಿಗೆ ಒದಗಿಸುವ ಇರಾದೆ ಅವರದ್ದು. 'ಅಲ್ಲಿ ಮೊದಲು ಕೊಳೇಗೇರಿಗಳಿಗೆ ಇದನ್ನು ವಿತರಿಸಬೇಕು. ಸಾಮೂಹಿಕ ಶೌಚಾಲಯಗಳಾಗಿ ಅಲ್ಲಿ ಬಳಸಬಹುದು. ಆದರೆ ಮಧ್ಯಮ ವರ್ಗದವರ ಮನೆಗಳಿಗೆ ಬಳಕೆಗೆ ಒದಗಿಸಿದರೆ ಸಮಾಜಕ್ಕೆ ಇದರ ಲಾಭ ಹೆಚ್ಚು' ಎಂದಿದ್ದಾರೆ ಗೇಟ್ಸ್. ಈ ಹೊಸ ಶೌಚಾಲಯದ ಪ್ರಚಾರಕ್ಕೆಂದು ಸ್ವತಃ ಅವರೇ ವೀಡಿಯೋ ಗಳಲ್ಲಿ ಕಾಣಿಸಿಕೊಂಡಿದ್ದಾರೆ!

ಶತಕೋಟ್ಯಧಿಪತಿಗಳಿಗೆ ಶೋಕಿಗಳಿಗೆ ಬರವಿಲ್ಲ. ಆದರೆ ಈ ಬಿಲ್ ಗೇಟ್ಸ್ ಅವರಲ್ಲೇ ಅತ್ಯಂತ ವಿಭಿನ್ನ ವ್ಯಕ್ತಿ. 86 ಶತಕೋಟಿ ಡಾಲರ್ ನಿವ್ವಳ ಆಸ್ತಿ ಹೊಂದಿರುವ ಗೇಟ್ಸ್ ಅದರಿಂದ ಸರಾಸರಿ ಶೇಕಡಾ 6ರಷ್ಟು ಪ್ರತಿಫಲ ಪಡೆಯುತ್ತಾರೆ ಎಂದಿಟ್ಟುಕೊಂಡರೂ, ಪ್ರತಿ ಸೆಕೆಂಡಿಗೆ ಅವರ ಆದಾಯ 114.16 ಡಾಲರ್ ಹೆಚ್ಚುತ್ತಿರುತ್ತದೆ. ತಮ್ಮ ಆದಾಯದ ಬಹುತೇಕ ಪಾಲನ್ನು ಅವರು ಸಮಾಜಕ್ಕೆ ಉಪಯೋಗವಾಗುವ ದತ್ತಿ ಉದ್ದೇಶಗಳಿಗೆ ಬಳಸುತ್ತಿದ್ದಾರೆ. ಅದಕ್ಕೆಂದೇ ಬಿಲ್ ಆ್ಯಂಡ್ ಮೆಲಿಂಡಾ ಫೌಂಡೇಷನ್ ಸ್ಥಾಪನೆಯಾಗಿದೆ. ಈ ಪ್ರತಿಷ್ಠಾನ 39.6 ಶತಕೋಟಿ ಡಾಲರ್ ಮೌಲ್ಯದ ಸಂಪತ್ತು ಹೊಂದಿದ್ದು, ಹೊಸ ಮಾದರಿಯ ಟಾಯ್ಲೆಟ್ ನಿರ್ಮಾಣಕ್ಕೂ ಹಣ ಖರ್ಚು ಮಾಡುತ್ತಿದೆ. ಗೇಟ್ಸ್ ದಂಪತಿಗೆ ಮೂವರು ಮಕ್ಕಳಿದ್ದಾರೆ. ಇಬ್ಬರು ಪದವಿ ಮುಗಿಸಿ ಯೂನಿವರ್ಸಿಟಿ ಸೇರಿಕೊಂಡಿದ್ದಾರೆ. ಒಂದು ಮೂಲದ ಪ್ರಕಾರ, ಮೂವರು ಮಕ್ಕಳಿಗೆ ತಮ್ಮ ಆಸ್ತಿಯಲ್ಲಿ ತಲಾ ಒಂದು ಕೋಟಿ ಡಾಲರ್ ಹಣವನ್ನಷ್ಟೇ ಕೊಡಲು ದಂಪತಿ ನಿರ್ಧರಿಸಿದ್ದಾರಂತೆ. ಉಳಿದದ್ದೆಲ್ಲ ಸಮಾಜಸೇವೆಗೆ. ಈಗಾಗಲೆ ಜಗತ್ತಿನ ಬಡದೇಶಗಳ ಕೋಟ್ಯಂತರ ಮಕ್ಕಳ ಪೌಷ್ಟಿಕತೆಯ ಕೊರತೆ ನೀಗಿಸಲು ಈ ಫೌಂಡೇಷನ್ ಕೋಟ್ಯಂತರ ಡಾಲರ್ ವ್ಯಯಿಸಿದೆ.

ಮೈಕ್ರೊಸಾಫ್ಟ್‌ನಲ್ಲಿ ಬಿಲ್ ಗೇಟ್ಸ್ ಕೆಲಸ ಮಾಡಿದ ಕೊನೆಯ ದಿನ 2008ರ ಜೂನ್ 27. ಆರು ವರ್ಷಗಳ ಬಳಿಕ 2014ರ ಫೆಬ್ರುವರಿಯಲ್ಲಿ ಅವರು ಚೇರ್‌ಮನ್ ಹುದ್ದೆಗೂ ರಾಜೀನಾಮೆ ನೀಡಿದರು. ಸದ್ಯಕ್ಕೆ ಅವರು ಕಂಪನಿಯ ಚೇರ್‌ಮನ್ ಸತ್ಯ ನಾಡೆಲ್ಲಗೆ ತಾಂತ್ರಿಕ ಸಲಹೆಗಾರ ಅಷ್ಟೆ. ಇನ್ನುಳಿದ ಜೀವನಪೂರ್ತಿ ಸಮಾಜ ಸೇವೆಯ ಕೆಲಸ ಬಿಟ್ಟು ಬೇರೇನೂ ಮಾಡುವುದಿಲ್ಲ ಎಂದು ಗೇಟ್ಸ್ ನಿರ್ಧರಿಸಿದ್ದಾರೆ. ಹಾಗೆಂದು ಮನೆಯಲ್ಲಿ ರಾತ್ರಿ ಊಟ ಆದ ಮೇಲೆ ಕುಟುಂಬದ ಸದಸ್ಯರ ತಟ್ಟೆ ತೊಳೆಯುವ ಕೆಲಸವನ್ನು ಅವರು ನಿಲ್ಲಿಸುವುದಿಲ್ಲವಂತೆ! 'ತಟ್ಟೆ ತೊಳೆಯುವುದು ಮತ್ತು ಮಲಗುವ ಮುನ್ನ ಒಂದು ಗಂಟೆ ಕಾಲ ಯಾವುದಾದರೂ ಪುಸ್ತಕ ಓದುವುದು ನನ್ನ ಅತ್ಯಂತ ನೆಚ್ಚಿನ ಕ್ರಿಯೆ' ಎಂದಿದ್ದಾರೆ ಗೇಟ್ಸ್.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65